2016 ಕ.ತೀ.ವ 1701

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

### ಬಿ.ಸಿ. ಸುರೇಶ -ವಿರುದ್ಧ- ಸುಮಿತ್ರ*

ದಂಡ ಪ್ರಕ್ರಿಯಾ ಸಂಹಿತೆ ಕಲಂ 482 ರಡಿಯಲ್ಲಿ ಕ್ರಿಮಿನಲ್ ಅರ್ಜಿ.

ಅರ್ಜಿದಾರರು ಭಾರತ ದಂಡ ಸಂಹಿತೆ ಕಲಂ 415 ಹಾಗೂ 420ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿರುವರೆಂದು ಎದುರುದಾರರು ನೀಡಿದ ಫಿರ್ಯಾದನ್ನಾಧರಿಸಿ, ಫಿರ್ಯಾದುದಾರರ ಹೇಳಿಕೆಯನ್ನು ದಾಖಲಿಸಿ ಜೆಎಂಎಫ್‌ಸಿ ನ್ಯಾಯಾಲಯ ಅರ್ಜಿದಾರರಿಗೆ ನೀಡುವ ಸಮನ್ಸ್ ಅನ್ನು ಸತ್ರ ನ್ಯಾಯಾಲಯದಲ್ಲಿ ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸುವ ಮೂಲಕ ಪ್ರಶ್ನಿಸಲಾಗಿ, ಪರಿಷ್ಕರಣಾ ಅರ್ಜಿಯು ವಜಾಗೊಳಿಸಲ್ಪಡುತ್ತದೆ. ತತ್ಪರಿಣಾಮವಾಗಿ ಸದರಿ ಅರ್ಜಿಯನ್ನು ಸಲ್ಲಿಸಲಾಗಿದೆ.

ಎರಡನೇ ಫಿರ್ಯಾದನ್ನು, ಮೊದಲನೇ ಫಿರ್ಯಾದನ್ನು ಪರಿತ್ಯಾಗ ಮಾಡದೆಯೇ ದಾಖಲಿಸಲಾಗಿದೆ. ಈ ಕಾರಣದಿಂದ ತದ ನಂತರದ ಕ್ರಮ ದೋಷವುಳ್ಳ ನಡವಳಿಗಳು ನಿರರ್ಥಕವೆಂದು ಮತ್ತು ರದ್ದುಗೊಳಿಸಲು ಬದ್ಧವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾದಲ್ಲಿ* |
|---|---|
| *1. (2005) 7 ಎಸ್‌ಸಿಸಿ 467 ಸಿಆರ್‌ಇಎಫ್ ಫೈನಾನ್ಸ್ ಲಿಮಿಟೆಡ್ -ವಿರುದ್ಧ- ಶ್ರೀ ಶಾಂತಿ ಹೋಮ್ಸ್ (ಪ್ರೈ) ಲಿಮಿಟೆಡ್ ಮತ್ತು ಇನ್ನೊಬ್ಬರು* | *(ಉಲ್ಲೇ) 12* |

*ಕ್ರಿಮಿನಲ್ ಅರ್ಜಿ ಸಂಖ್ಯೆ: 1650/2016, ದಿನಾಂಕ: 20ನೇ ಸೆಪ್ಟೆಂಬರ್, 2016.

ಅರ್ಜಿದಾರರ ಪರ: ಶ್ರೀ ಎಸ್.ಜಿ. ಭಗವಾನ್, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎಸ್. ಶಂಕರಪ್ಪ, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ :**

ವಿಷಯವನ್ನು ಅಂಗೀಕರಿಸಲು ಪಟ್ಟಿ ಮಾಡಲಾಗಿದ್ದರೂ, ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ಸಮ್ಮತಿ ಪಡೆದು ಅಂತಿಮ ನ್ಯಾಯನಿರ್ಣಯಕ್ಕಾಗಿ ಕೈಗೆತ್ತಿಕೊಳ್ಳಲಾಗಿದೆ.

2. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದೆ.

3. ಇದರಲ್ಲಿನ ಪಕ್ಷಕಾರನು ಮಂಡ್ಯ ಜಿಲ್ಲೆಯ ಜೆಎಂಎಫ್‌ಸಿ ಕಡತದಲ್ಲಿನ ಪಿ.ಸಿ.ಆರ್.ಸಂಖ್ಯೆ 110/2015ರಲ್ಲಿ ಆಪಾದಿತನಾಗಿದ್ದಾನೆ.

4. ಸಂಕ್ಷಿಪ್ತವಾಗಿ ಹೇಳಲಾದಂತೆ, ಎದುರುದಾರಳು ಮೂವರು ಆಪಾದಿತ ವ್ಯಕ್ತಿಗಳ ವಿರುದ್ಧ ಭಾರತ ದಂಡ ಸಂಹಿತೆ ಕಲಂ 415 ಮತ್ತು 420 ರಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿ, ಸಂಬಂಧಪಟ್ಟ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಖಾಸಗಿ ದೂರನ್ನು ದಾಖಲಿಸಿದ್ದು, ಅದನ್ನು ನ್ಯಾಯಾಲಯವು ಪಿ.ಸಿ.ಆರ್.ಸಂಖ್ಯೆ 110/2009ರಲ್ಲಿ ನೋಂದಾಯಿಸಿದ್ದು, ದಿನಾಂಕ 6.10.2009ರಂದು ಮಂಡಿಸಲಾಗಿದೆ. ಮಾನ್ಯ ಮ್ಯಾಜಿಸ್ಟ್ರೇಟರು ಫಿರ್ಯಾದಿಯ ವಚನಬದ್ಧ ಹೇಳಿಕೆಯನ್ನು ದಾಖಲಿಸಿದ್ದಾರೆ ಮತ್ತು ವಿಷಯವನ್ನು ತನಿಖೆಗಾಗಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಪೊಲೀಸರು ಮೊದಲ ಮಾಹಿತಿ ವರದಿಯನ್ನು ದಾಖಲಿಸಿ, ತನಿಖೆಯಾದ ಮೇಲೆ 'ಬಿ' ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಮಾನ್ಯ ಮ್ಯಾಜಿಸ್ಟ್ರೇಟರು ಫಿರ್ಯಾದಿಯ ವಚನಬದ್ಧ ಹೇಳಿಕೆಯನ್ನು ಮತ್ತೊಮ್ಮೆ ದಾಖಲಿಸಿದ್ದಾರೆ ಮತ್ತು ಆಪಾದಿತರಿಗೆ ಆದೇಶಿಕೆಯನ್ನು ಹೊರಡಿಸಿದ್ದಾರೆ. ಜೆಎಂಎಫ್‌ಸಿ ನ್ಯಾಯಾಲಯದಿಂದ ಆದೇಶಿಕೆ ಹೊರಡಿಸಿದ್ದನ್ನು

ಪರಿಷ್ಕರಣಾ ಅರ್ಜಿಯಲ್ಲಿ ಪ್ರಶ್ನಿಸಿದಾಗ, ಸತ್ರ ನ್ಯಾಯಾಲಯವು 1 ಮತ್ತು 3ನೇ ಆಪಾದಿತರಿಗೆ ಸಂಬಂಧಪಡುವಷ್ಟರಮಟ್ಟಿಗೆ ಅರ್ಜಿಯನ್ನು ಪುರಸ್ಕರಿಸಿತು. ಈಗಿನ ಅರ್ಜಿದಾರನಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಪರಿಷ್ಕರಣಾ ಅರ್ಜಿಯನ್ನು ವಜಾ ಮಾಡಲಾಯಿತು.

5. ದಿನಾಂಕ 6ನೇ ಸೆಪ್ಟೆಂಬರ್ 2013ರ ಕ್ರಿಮಿನಲ್ ಅರ್ಜಿ ಸಂಖ್ಯೆ 4377/2012ರಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ಕೆಳ ನ್ಯಾಯಾಲಯದಿಂದ ಹೊರಡಿಸಲಾದ ಆದೇಶದ ಕಾನೂನು ಸಮ್ಮತತೆಯನ್ನು ಪರಿಗಣಿಸಿದೆ ಮತ್ತು ಅರ್ಜಿಯನ್ನು ಪುರಸ್ಕರಿಸಿದೆ. ಅದರ ಪರಿಣಾಮಕಾರಿ ಭಾಗವನ್ನು ಈ ಮುಂದಿನಂತೆ ಓದಲಾಗುತ್ತದೆ:

> *"ಈ ಮೇಲಿನ ದೃಷ್ಟಿಯಿಂದ, ಅರ್ಜಿಯನ್ನು ಪುರಸ್ಕರಿಸಲಾಗಿದೆ ಮಂಡ್ಯದ ಜೆಎಂಎಫ್‌ಸಿ ಕಡತದಲ್ಲಿನ ಸಿ.ಸಿ.ಸಂಖ್ಯೆ 589/2010 ರಲ್ಲಿನ ಇಡೀ ವ್ಯವಹರಣೆಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ. ಈ ಅರ್ಜಿದಾರನ-1ನೇ ಆಪಾದಿತನ ವಿರುದ್ಧವಾಗಿರುವ ದೂರನ್ನು ಮಾತ್ರ ಸಲ್ಲಿಸುವ ಹಂತದಿಂದ ವಿಷಯವನ್ನು ಮತ್ತೆ ಹೊಸದಾಗಿ ಪರಿಗಣಿಸಲು ಮಾನ್ಯ ಮ್ಯಾಜಿಸ್ಟ್ರೇಟರಿಗೆ ನಿರ್ದೇಶಿಸಲಾಗಿದೆ".*

6. ಮಾನ್ಯ ಮ್ಯಾಜಿಸ್ಟ್ರೇಟರು ವ್ಯವಹರಣೆಗಳನ್ನು ಮತ್ತೆ ಹೊಸದಾಗಿ ಪ್ರಾರಂಭಿಸಿದ್ದಾರೆ ಮತ್ತು ಫಿರ್ಯಾದುದಾರನ ವಚನಬದ್ಧ ಹೇಳಿಕೆಯನ್ನು ದಾಖಲಿಸಿದ್ದಾರೆ. ಹಾಗೂ ಆ ನಂತರ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡಿದ್ದಾರೆ ಮತ್ತು ಆಪಾದಿತ ವ್ಯಕ್ತಿಗಳಿಗೆ ಸಮನುಗಳನ್ನು ಹೊರಡಿಸಿದ್ದಾರೆ. ಅದು ಆಪಾದಿತನು ಈ ನ್ಯಾಯಾಲಯದ ಮುಂದೆ ಕ್ರಿಮಿನಲ್ ಅರ್ಜಿ ಸಂಖ್ಯೆ 6014/2015ನ್ನು ಸಲ್ಲಿಸುವಲ್ಲಿ ಮುಕ್ತಾಯವಾಯಿತು. ದಿನಾಂಕ 15.9.2015ರ ಆದೇಶದಲ್ಲಿರುವಂತೆ, ಸದರಿ ಕ್ರಿಮಿನಲ್ ಅರ್ಜಿಯನ್ನು ಪುರಸ್ಕರಿಸಲಾಯಿತು. ಆದೇಶದ ಪರಿಣಾಮಕಾರಿ ಭಾಗವನ್ನು ಈ ರೀತಿ ಓದಲಾಗುತ್ತದೆ:

*''ಈ ಮೇಲಿನ ಅಭಿಪ್ರಾಯದೊಂದಿಗೆ, ಅರ್ಜಿಯನ್ನು ಪುರಸ್ಕರಿಸಲಾಗಿದೆ. ಮಂಡ್ಯದ ಜೆಎಂಎಫ್‌ಸಿ ಕಡತದಲ್ಲಿ ಇತ್ಯರ್ಥದಲ್ಲಿರುವ ಸಿ.ಸಿ. ಸಂಖ್ಯೆ 589/2010ರಲ್ಲಿನ ವ್ಯವಹರಣೆಯನ್ನು ಈ ಮೂಲಕ ರದ್ದುಪಡಿಸಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 156 (3)ನೇ ಪ್ರಕರಣದಡಿ ಅಥವಾ 200ನೇ ಪ್ರಕರಣದಡಿ ಉದ್ದೇಶಿಸಲಾದಂತೆ, ದೂರಿಗೆ ಸಂಬಂಧಿಸಿ ಕ್ರಮ ಜರುಗಿಸುವಂತೆ ಮಾನ್ಯ ಮ್ಯಾಜಿಸ್ಟ್ರೇಟರಿಗೆ ನಿರ್ದೇಶಿಸಲಾಗಿದೆ.*

7. ಮೇಲ್ಕಂಡ ಆದೇಶದ ತರುವಾಯ, ಫಿರ್ಯಾದುದಾರನು ದಿನಾಂಕ 27.11.2015ರಂದು ಹೊಸ ಅರ್ಜಿಯನ್ನು ಸಲ್ಲಿಸಿದ್ದಾನೆ ಎಂಬುದು ಈಗ ನ್ಯಾಯವಾದಿಗಳ ವರ್ಗದ ನಿವೇದನೆಯಾಗಿದೆ. ಈ ಸಲವೂ ಸಹ, ಸಂಜ್ಞೇಯತೆಯನ್ನು ತೆಗೆದುಕೊಳ್ಳದೆ, ಫಿರ್ಯಾದುದಾರನ ವಚನಬದ್ಧ ಹೇಳಿಕೆಯನ್ನು ದಾಖಲಿಸಲಾಗಿದೆ. ಆನಂತರ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಯಿತು ಮತ್ತು ಆಪಾದಿತರಿಗೆ ಸಮನುಗಳನ್ನು ಹೊರಡಿಸಲಾಯಿತು. ಸಿ.ಸಿ. ಸಂಖ್ಯೆ 1214/2015 ಎಂಬುದಾಗಿ ಹೊಸ ಸಿ.ಸಿ. ಸಂಖ್ಯೆಯನ್ನು ನೀಡಲಾಗಿದೆಯೆಂಬುದೂ ಸಹ ಅವರ ನಿವೇದನೆಯಾಗಿದೆ.

8. ನ್ಯಾಯವಾದಿ ವರ್ಗ ಮತ್ತು ಅಧೀನ ನ್ಯಾಯಾಲಯದಲ್ಲಿನ ನ್ಯಾಯಪೀಠ –ಇವೆರಡೂ ಈ ನ್ಯಾಯಾಲಯವು ನೀಡಿದ ನಿರ್ದೇಶನವನ್ನು ಎರಡೂ ಸಂದರ್ಭಗಳಲ್ಲಿ ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಲಾಗಿಲ್ಲವೆಂಬುದು ದುರದೃಷ್ಟಕರ ಸಂಗತಿಯಾಗಿದೆ. ಕ್ರಿಮಿನಲ್ ಅರ್ಜಿ ಸಂಖ್ಯೆ 4377/2012ರಲ್ಲಿ ಆದೇಶದ 7ನೇ ಕಂಡಿಕೆಯಲ್ಲಿ, ಈ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿದೆ:

*"‥ . . . . . . . ಹಾಜರುಪಡಿಸಲಾದ ವ್ಯವಹರಣೆಯ ದಾಖಲೆ ಪತ್ರದ ಪ್ರಮಾಣಿತ ಪ್ರತಿಯ ಅವಗಾಹನೆಯಿಂದ, ವಚನಬದ್ಧ ಹೇಳಿಕೆಯನ್ನು ದಾಖಲಿಸಲು ಮುಂದುವರೆಯುವ ಮುನ್ನ, ಮಾನ್ಯ*

*ಮ್ಯಾಜಿಸ್ಟ್ರೇಟರು ಆಪಾದಿಸಲಾದ ಅಪರಾಧದ ಸಂಜ್ಞೇಯತೆಯನ್ನು ತಾನು ತೆಗೆದುಕೊಂಡಿರುವುದಾಗಿ ಸೂಚಿಸಿಲ್ಲವೆಂಬುದು ಸ್ಪಷ್ಟವಾಗಿದೆ".*

ಆದರೆ, ಈ ಅಭಿಪ್ರಾಯವನ್ನು ಕೈಬಿಡಲಾಗಿದೆ ಮತ್ತು ವಿಷಯವನ್ನು ಹಿಂದಿರುಗಿಸಿದ ಮೇಲೆ ಮಾನ್ಯ ಮ್ಯಾಜಿಸ್ಟ್ರೇಟರು ಮೊದಲಿಗೆ ಫಿರ್ಯಾದುದಾರನ ಹೇಳಿಕೆಯನ್ನು ದಾಖಲಿಸಿದ್ದಾರೆ ಹಾಗೂ ಆ ನಂತರ ಆಪಾದಿತರಿಗೆ ಸಮನುಗಳನ್ನು ಹೊರಡಿಸುವ ಮುಂಚೆ ಸಂಜ್ಞೇಯತೆಯನ್ನು ತೆಗೆದುಕೊಂಡಿದ್ದಾರೆ.

9. ಕ್ರಿಮಿನಲ್ ಅರ್ಜಿ ಸಂಖ್ಯೆ 6014/2015ರಲ್ಲಿ ಈ ನ್ಯಾಯಾಲಯದ ಆದೇಶದಲ್ಲಿರುವಂತೆ, ವಿಷಯವನ್ನು ಹಿಂದಿರುಗಿಸಿದ ನಂತರ ಅದೇ ತಪ್ಪು ಪುನರಾವರ್ತನೆಯಾಯಿತು. ಸದರಿ ಆದೇಶದ 5ನೇ ಕಂಡಿಕೆಯಲ್ಲಿನ ಅಭಿಪ್ರಾಯವನ್ನು ಹೀಗೆ ಓದಲಾಗುತ್ತದೆ:

*"ಮೇಲಿನ ಅಭಿಪ್ರಾಯದೊಂದಿಗೆ, ಅರ್ಜಿಯನ್ನು ಪುರಸ್ಕರಿಸಲಾಗಿದೆ. ಮಂಡ್ಯದ ಜೆಎಂಎಫ್‌ಸಿ ಕಡತದಲ್ಲಿ ಇತ್ಯರ್ಥದಲ್ಲಿರುವ ಸಿ.ಸಿ. ಸಂಖ್ಯೆ 589/2010ರಲ್ಲಿನ ವ್ಯವಹರಣೆಯನ್ನು ಈ ಮೂಲಕ ರದ್ದುಪಡಿಸಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 156(3) ಅಥವಾ 200ನೇ ಪ್ರಕರಣದಡಿ ಉದ್ದೇಶಿಸಲಾದಂತೆ, ದೂರಿಗೆ ಸಂಬಂಧಿಸಿ ಕ್ರಮ ಕೈಗೊಳ್ಳುವಂತೆ ಮಾನ್ಯ ಮ್ಯಾಜಿಸ್ಟ್ರೇಟರಿಗೆ ನಿರ್ದೇಶಿಸಲಾಗಿದೆ."*

10. ಹೊಸ ದೂರನ್ನು ಸಲ್ಲಿಸಲು ಮತ್ತು ಫಿರ್ಯಾದುದಾರನ ವಚನಬದ್ಧ ಹೇಳಿಕೆಯನ್ನು ದಾಖಲಿಸುವ ಹಂತದಿಂದ ವಿಷಯವನ್ನು ಹೊಸದಾಗಿ ಕೈಗೆತ್ತಿಕೊಳ್ಳಲು ನಿರ್ದೇಶಿಸಿರುವ ಕಾರಣ ಈ ಸಲ ಮೇಲ್ಕಂಡ ಆದೇಶವು ನ್ಯಾಯಾಲಯದ ಹಾಗೂ ಫಿರ್ಯಾದುದಾರನ ಪರವಾಗಿ ದನಿಯೆತ್ತಿದೆ. ಮಾನ್ಯ ಮ್ಯಾಜಿಸ್ಟ್ರೇಟರು ದೂರನ್ನು ಸ್ವೀಕರಿಸಿದ ಮೇಲೆ, ಅದರ ಒಳಾಂಶಗಳನ್ನು ಪರಿಶೀಲಿಸಿದ್ದಲ್ಲಿ ಮತ್ತು ಅದನ್ನು ಸಂಜ್ಞೇಯತೆಗೆ ತೆಗೆದುಕೊಂಡಿದ್ದಲ್ಲಿ, ಆಪಾದಿತನಿಗೆ ಹೊರಡಿಸಲಾದ ಆದೇಶಿಕೆಯನ್ನು

ಈ ನ್ಯಾಯಾಲಯವು ಅನುಮೋದಿಸಿರುತ್ತಿತ್ತು. ಆದರೆ ಅದು ಹಾಗಾಗಿಲ್ಲ. ದೂರನ್ನು ಸ್ವೀಕರಿಸಿದ ಮೇಲೆ ಫಿರ್ಯಾದುದಾರನ ವಚನಬದ್ಧ ಹೇಳಿಕೆಯನ್ನು ದಾಖಲಿಸುವುದಕ್ಕಾಗಿ ವಿಷಯವನ್ನು ಪಟ್ಟಿ ಮಾಡಲಾಯಿತು. ಆಪಾದಿತನ ಹೇಳಿಕೆಯಿಂದ ಹಾಗೂ ಮಂಡಿಸಿದ ಸಾಕ್ಷ್ಯಾಧಾರಗಳಿಂದ, ಭಾರತ ದಂಡ ಸಂಹಿತೆಯ 415 ಮತ್ತು 420ನೇ ಪ್ರಕರಣಗಳಡಿಯಲ್ಲಿ, ಅಪರಾಧಗಳಿಗೆ ಸಂಬಂಧಿಸಿದಂತೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಸಾಕಷ್ಟು ಸಾಕ್ಷ್ಯಾಧಾರವಿದೆಯೆಂದು ಅಭಿಪ್ರಾಯಪಟ್ಟಿದೆ.

11. ತಪ್ಪು ಕಲ್ಪನೆಯಿಂದ ಮೊದಲನೇ ದೂರನ್ನು ಪರಿತ್ಯಜಿಸದೆಯೇ ಎರಡನೇ ದೂರನ್ನು ಸಲ್ಲಿಸಿರುವ ಕಾರಣದಿಂದಾಗಿ, ಪಿ.ಸಿ.ಆರ್. ಸಂಖ್ಯೆ 110/2015ರಲ್ಲಿ ದಿನಾಂಕ 27.11.2015ರ ಎರಡನೇ ದೂರು ಮತ್ತು ತತ್ಪರಿಣಾಮವಾದ ಕ್ರಮದೋಷವುಳ್ಳ ವ್ಯವಹರಣೆಗಳು ನಿರರ್ಥಕವಾಗಿವೆ ಮತ್ತು ರದ್ದುಗೊಳಿಸಲು ಬದ್ಧವಾಗಿವೆ. ಫಿರ್ಯಾದುದಾರನು ತನ್ನ ಮೊಕದ್ದಮೆಯನ್ನು ಅದರ ತರ್ಕಬದ್ಧ ಮುಕ್ತಾಯಕ್ಕೆ ಕೊಂಡೊಯ್ಯಲು ನಿಜವಾಗಿಯೂ ಉದ್ದೇಶಿಸಿದಲ್ಲಿ, ಅವನು ಪಿ.ಸಿ.ಆರ್. ಸಂಖ್ಯೆ 110/2009 ದಿನಾಂಕ 06.10.2009ರಲ್ಲಿನ ತನ್ನ ದೂರಿನ ಆಧಾರದ ಮೇಲೆ ಮುಂದುವರೆಯತಕ್ಕದ್ದು.

12. ಖಾಸಗಿ ದೂರಿನಲ್ಲಿ ನ್ಯಾಯಾಲಯವು ಯಾವ ಹಂತದಲ್ಲಿ ಸಂಜ್ಞೇಯತೆಯನ್ನು ತೆಗೆದುಕೊಳ್ಳುತ್ತದೆ ಎಂಬುದಕ್ಕೆ ಸಂಬಂಧಿಸಿ, ಪ್ರಶ್ನಿತ ಕಾನೂನು ಯಾವುದೇ ಅನಿಶ್ಚಿತತೆಯಿಲ್ಲದ್ದಾಗಿದೆ. ಸಂಜ್ಞೇಯತೆಯನ್ನು ಪ್ರಾರಂಭಿಕ ಹಂತದಲ್ಲಿ ತೆಗೆದುಕೊಳ್ಳಲಾಗಿದ್ದು, ಯಾವುದೇ ಅಪರಾಧ ಎಸಗಿರುವುದನ್ನು ಬಹಿರಂಗಪಡಿಸಲಾಗಿದೆಯೇ? ಎಂಬುದನ್ನು ನಿಶ್ಚಿತಪಡಿಸಿಕೊಳ್ಳುವ ದೃಷ್ಟಿಯಿಂದ ದೂರನ್ನು ಮ್ಯಾಜಿಸ್ಟ್ರೇಟರು ಪರಿಶೀಲಿಸಿದಾಗ ಸಂಜ್ಞೇಯತೆಗೆ ತೆಗೆದುಕೊಳ್ಳಲಾಗಿದೆ. ***(ಸಿಆರ್‌ಇಎಫ್ ಫೈನಾನ್ಸ್ ಲಿಮಿಟೆಡ್ –ವಿರುದ್ಧ– ಶ್ರೀ ಶಾಂತಿ ಹೋಮ್ಸ್ (ಪ್ರೈ) ಲಿಮಿಟೆಡ್ ಮತ್ತು ಇನ್ನೊಬ್ಬರು[1]*** .)

1. (2005) 7 ಎಸ್‌ಸಿಸಿ 467

13. ಈ ನ್ಯಾಯಾಲಯದ ಕಳಕಳಿಯೇನೆಂದರೆ, ನ್ಯಾಯಾಲಯಗಳ ಪ್ರಕ್ರಿಯೆಯನ್ನು ದೂಷಿಸಿರುವ ರೀತಿಯು, ವಾಗ್ದಂಡನೆಗಿಂತ ಕಡಿಮೆಯಾದದ್ದೇನೂ ಅಲ್ಲ. ಈ ನ್ಯಾಯಾಲಯದ, ಅದೇ ರೀತಿ ಅಧೀನ ನ್ಯಾಯಾಲಯದ ಅಮೂಲ್ಯ ಸಮಯವು ವ್ಯರ್ಥವಾಗಿದೆ ಮತ್ತು ಇದರಲ್ಲಿನ ಅರ್ಜಿದಾರನು ಪ್ರತಿಬಾರಿಯೂ ಮಾಡಿರುವುದೇನೆಂದರೆ ಇಲ್ಲಿಂದಲ್ಲಿಗೆ ಹಾಗೂ ಅಲ್ಲಿಂದಿಲ್ಲಿಗೆ ಅಲೆದಾಡಿರುವುದು. ಎರಡೂ ಪಕ್ಷಕಾರರು 2009ರಿಂದ ನ್ಯಾಯಾಲಯಕ್ಕೆ ಅಲೆದಾಡಿ ಶಕ್ತಿಗುಂದಿದ್ದು, ಅಂತಿಮ ಪರಿಹಾರ ಸಿಗದೆ ಬಾಧಿತರಾಗಿದ್ದಾರೆ.

14. ನ್ಯಾಯವಾದಿ ವರ್ಗ ಮತ್ತು ನ್ಯಾಯಪೀಠ – ಇವೆರಡೂ ಸಹ ಈ ವಿಷಯದಲ್ಲಿ ಮುಂದಿನ ಕ್ರಮಗಳನ್ನುಕೈಗೊಳ್ಳುವ ಮುಂಚೆ, ಸೂಕ್ತ ಕಾನೂನು ಉಪಬಂಧಗಳೊಂದಿಗೆ ಕ್ರಿಮಿನಲ್ ಅರ್ಜಿ ಸಂಖ್ಯೆ 4377/2012 ಮತ್ತು ಕ್ರಿಮಿನಲ್ ಅರ್ಜಿ ಸಂಖ್ಯೆ 6014/2015ರಲ್ಲಿ ಈ ನ್ಯಾಯಾಲಯವು ಹೊರಡಿಸಿದ ಆದೇಶಗಳನ್ನು ಓದಬೇಕೆಂದು ನಿರೀಕ್ಷಿಸಲಾಗಿದೆ. ಮೇಲೆ ಹೇಳಿದ ಕಾರಣಗಳಿಗಾಗಿ, ಸಿ.ಸಿ.ಸಂಖ್ಯೆ 1214/2015ರಲ್ಲಿ ನೋಂದಾಯಿಸಲಾದ ಪಿ.ಸಿ.ಆರ್. ಸಂಖ್ಯೆ 110/2015ರ ಇಡೀ ವ್ಯವಹರಣೆಗಳು ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣವಾಗಿವೆ ಮತ್ತು ಅವು ರದ್ದುಪಡಿಸಲು ತಕ್ಕದ್ದಾಗಿವೆ.

ತದನುಸಾರವಾಗಿ, ಅರ್ಜಿಯನ್ನು ಪುರಸ್ಕರಿಸಲಾಗಿದೆ. ದೂರನ್ನು ಮತ್ತು ಮಂಡ್ಯದ ಜೆಎಂಎಫ್‌ಸಿ ಕಡತದಲ್ಲಿನ ಪಿ.ಸಿ.ಆರ್. ಸಂಖ್ಯೆ: 110/2015 (ಸಿ.ಸಿ.ಸಂ.1214/2015)ರಲ್ಲಿನ, ತರುವಾಯದ ವ್ಯವಹರಣೆಗಳನ್ನು ರದ್ದುಪಡಿಸಲಾಗಿದೆ. ಅಧಿವಿಚಾರಣಾ ನ್ಯಾಯಾಲಯಕ್ಕೆ, ಪಿ.ಸಿ.ಆರ್. ಸಂಖ್ಯೆ: 110/2009 ರಲ್ಲಿ, ಅದರ ಕಡತದಲ್ಲಿ ನೋಂದಾಯಿಸಲಾದ ದಿನಾಂಕ 6.10.2009ರ ದೂರನ್ನು ವಿಚಾರಣೆಗಾಗಿ ಕೈಗೆತ್ತಿಕೊಳ್ಳುವಂತೆ ಮತ್ತು ದೂರಿನ ಒಳಾಂಶಗಳನ್ನು ಅವಗಾಹಿಸುವಂತೆ ಹಾಗೂ ಆ ನಂತರ ಫಿರ್ಯಾದುದಾರನ ವಚನಬದ್ಧ ಹೇಳಿಕೆಯನ್ನು ದಾಖಲಿಸುವಂತೆ ನಿರ್ದೇಶಿಸಲಾಗಿದೆ. ಫಿರ್ಯಾದುದಾರನು ಮಂಡಿಸಿದ ಸಾಕ್ಷ್ಯಾಧಾರಗಳಿಂದ ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಮಾಡಿದ್ದಲ್ಲಿ, ಕ್ರಿಮಿನಲ್ ಕೇಸನ್ನು ದಾಖಲು

ಮಾಡಲು ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ XVನೇ ಅಧ್ಯಾಯದ ಅನುಸಾರ ಮುಂದುವರೆಯಲು ಆದೇಶಿಸಲಾಗಿದೆ.

ಮೇಲೆ ಪರಿಗಣಿಸಲಾದ ಪ್ರಕ್ರಿಯಾತ್ಮಕ ಅಂಶಕ್ಕೆ ಸಂಬಂಧಿಸಿದಂತೆ, ಆಯಾ ಜಿಲ್ಲೆಗಳ ನ್ಯಾಯಿಕ ಅಧಿಕಾರಿಗಳು/ಜೆಎಂಎಫ್‌ಸಿ ಗಳ ಸಂವೇದನತ್ವವನ್ನು ತೀವ್ರಗೊಳಿಸಲು ಸಂಬಂಧಪಟ್ಟ ಜಿಲ್ಲೆಗಳ ಎಲ್ಲಾ ಪ್ರಧಾನ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರಿಗೆ ಈ ಆದೇಶದ ಪ್ರತಿಯನ್ನು ಗುರುತು ಮಾಡಲು 'ರಿಜಿಸ್ಟ್ರಿ'ಗೆ ನಿರ್ದೇಶಿಸಲಾಗಿದೆ.

---